


2

# ಬಯಲು – ನಗರ



**ಗುಡ್ಡ ಕಡಿದು ಮಣ್ಣು ಸಾಗಾಟ – ನಾಗರಿಕರ ತೀವ್ರ ವಿರೋಧ.**

ಮಂಗಳೂರು, ನ.15. : ಬಂಟ್ವಾಳದ ಬಳಿ ಜೆ.ಸಿ.ಬಿ. ಬಳಸಿ, ಗುಡ್ಡವನ್ನು ಅಗೆದು ಮಣ್ಣು ಸಾಗಿಸಲೆತ್ನಿಸಿದಾಗ ನಾಗರಿಕರಿಂದ ತೀವ್ರ ಪ್ರತಿಭಟನೆ ವ್ಯಕ್ತವಾದುದು ತಿಳಿದು ಬಂದಿದೆ.

**ಗದ್ದೆಗೆ ಮಣ್ಣು ತುಂಬಿಸುವ ಪ್ರಯತ್ನ – ಇಬ್ಬರ ವಿರುದ್ಧ ಮೊಕದ್ದಮೆ ದಾಖಲು ...**

ಕಾಸರಗೋಡು, ಜನವರಿ 10 : ಮಂಜೇಶ್ವರ ಹೊಸಬೆಟ್ಟಿನಲ್ಲಿ ಉತ್ತಮ ಬೆಳೆ ಬೆಳೆಯುತ್ತಿದ್ದ ಗದ್ದೆಗೆ ಮಣ್ಣು ತುಂಬಿಸಿ ಸಮತಟ್ಟು ಮಾಡಲೆತ್ನಿಸಿದ ಇಬ್ಬರ ವಿರುದ್ಧ ಮಂಜೇಶ್ವರ ಪೋಲೀಸ್ ಠಾಣೆಯಲ್ಲಿ ಮೊಕದ್ದಮೆ ದಾಖಲಿಸಲಾಗಿದೆ....

**ಕೈಗಾರಿಕೆಯ ಹೆಸರಿನಲ್ಲಿ ನಿಸರ್ಗ ನಾಶವಾಗದಿರಲಿ.**

**– ಶ್ರೀನಿವಾಸ**

ಪೆರ್ಲ, ಜುಲೈ 2 : ಪ್ರಾಕೃತಿಕ ಸಂಪತ್ತು ನಮ್ಮ ಬದುಕಿಗೆ ಅನಿವಾರ್ಯ. ಕೈಗಾರಿಕೆಗಳು ದೇಶದ ಅಭಿವೃದ್ಧಿಗೆ ಅಗತ್ಯವಾದರೂ ಆ ಹೆಸರಲ್ಲಿ ನಿಸರ್ಗ ನಾಶವಾಗಬಾರದು ಎಂದು ಶ್ರೇಷ್ಠ ಪರಿಸರವಾದಿ ಶ್ರೀ ಶ್ರೀನಿವಾಸ ಕರೆಯಿತ್ತರು......

**ತೊಕ್ಕೋಟು – ಕೃತಕ ನೆರೆ**

ಮಂಗಳೂರು, ಜೂನ್ 15 : ತೊಕ್ಕೋಟು ಪ್ರದೇಶದಲ್ಲಿ ಬಯಲುಗಳು ಮಣ್ಣು ತುಂಬಿಸಲ್ಪಟ್ಟು ವಾಣಿಜ್ಯ ಸಂಕೀರ್ಣಗಳು ಬೆಳೆದು ನಿಂತಿವೆ. ಇದರ ಪರಿಣಾಮವಾಗಿ ಈಗ ಆ ಪರಿಸರವೆಲ್ಲಾ ಕೃತಕ ನೆರೆ ಭೀತಿಯನ್ನು ಎದುರಿಸುತ್ತಿವೆ ...


❒ ಮೇಲಿನ ಪತ್ರಿಕಾ ವಾರ್ತೆಯ ತುಣುಕುಗಳನ್ನು ಓದಿದಿರಲ್ಲವೇ? ನಿಮ್ಮೂರಿನಲ್ಲಿಯೂ ಈ ರೀತಿಯ ಕೆಲಸಗಳು ನಡೆಯುತ್ತಿವೆಯೇ? ತರಗತಿಯಲ್ಲಿ ಚರ್ಚಿಸಿ ನಿಮ್ಮ ಅಭಿಪ್ರಾಯಗಳನ್ನು ಬರೆದು ಮಂಡಿಸಿರಿ.



# ನಗರೀಕರಣ

ಮನೆಯಂಗಳದಲ್ಲಿ ನಿಂತು ನೋಡಿದರೆ ಸಾಕು, ಕಣ್ಣು ಹಾಯಿಸುವಷ್ಟು ದೂರಕ್ಕೂ ಕಾಣಿಸುತ್ತಿದ್ದ ಹಚ್ಚ ಹಸುರು ಗದ್ದೆಗಳು ಇತಿಹಾಸದ ಕಾಲಗರ್ಭ ಸೇರಿಬಿಟ್ಟಿವೆ. ಆಳೆತ್ತರವನ್ನು ಮೀರಿ ಬೆಳೆಯುತ್ತಿದ್ದ ಭತ್ತದ ರಾಶಿ ಆಧುನಿಕ ಜನಾಂಗದ ಪಾಲಿಗೆ ಹಳೆಯ ಕಾಲದ ವೈಭವವಾಗಿದೆ. ಪಟ್ಟಣಗಳ ಆಸುಪಾಸುಗಳ ಗದ್ದೆಗಳಲ್ಲಿ ಕೃಷಿ ಅಳಿದು ಹೋಗಿ, ವಾಣಿಜ್ಯ ಸಂಕೀರ್ಣ, ವಸತಿ ಸಂಕೀರ್ಣಗಳು ತಲೆಎತ್ತುತ್ತಿವೆ. ಹಳ್ಳಿಗಳು ಬೆಳೆದು ಪಟ್ಟಣಗಳಾಗಿ, ಪಟ್ಟಣಗಳು ಬೆಳೆದು ನಗರಗಳಾಗಿ ಬದಲಾಗುತ್ತಿವೆ. ನಗರಗಳು ವಿಸ್ತಾರಗೊಳ್ಳುತ್ತಿವೆ. ಇದನ್ನು ನಗರೀಕರಣವೆನ್ನುತ್ತಾರೆ. ನಗರೀಕರಣದ ಭರಾಟೆಯಿಂದಾಗಿ ಕೃಷಿಯೋಗ್ಯ ಬಯಲುಗಳು ಮಣ್ಣು ತುಂಬಿಸಲ್ಪಟ್ಟು ವಾಸದ ನಿವೇಶನಗಳಾಗಿ ಪರಿವರ್ತನೆಗೊಳ್ಳುತ್ತಿವೆ. ಕಟ್ಟಡ ನಿರ್ಮಾಣಕ್ಕೆ ಬೇಕಾದ ಇಟ್ಟಿಗೆಗಳಿಗಾಗಿ ದೊಡ್ಡ ಪ್ರಮಾಣದಲ್ಲಿ ಬಯಲುಗಳ ಮಣ್ಣು ವಿನಿಯೋಗವಾಗುತ್ತಿದೆ. ಇನ್ನೊಂದೆಡೆ ಬೃಹತ್ ಯೋಜನೆಗಳು ಕಾಲಿಡುತ್ತಿರುವ ಪ್ರದೇಶಗಳಲ್ಲಿ ಸಾವಿರಾರು ಎಕರೆ ಹೊಲಗದ್ದೆಗಳನ್ನು ಉದ್ಯಮಗಳು ನಾಮಾವಶೇಷ ಮಾಡುತ್ತಿವೆ. ಈ ಸಮಸ್ಯೆಗೆ ಇನ್ನೊಂದು ಮುಖವೂ ಇದೆ. ಹಲವು ತರದ ರೋಗಗಳ ಬಾಧೆ, ನೀರಿನ ವ್ಯವಸ್ಥೆ ಸರಿಯಾಗಿಲ್ಲದಿರುವುದು, ಕಾರ್ಮಿಕರ ಕೊರತೆ ಇತ್ಯಾದಿ ಕಾರಣಗಳಿಂದ ಕೃಷಿಯಲ್ಲಿ ಜನರು ನಿರಾಸಕ್ತಿ ಹೊಂದಿದ್ದಾರೆ.

ಕಾಸರಗೋಡಿನ ಅಡ್ಕತ್ತಬೈಲು, ಬೀರಂತಬೈಲು ಮೊದಲಾದವು ಇಂದು ಬಯಲುಗಳಾಗಿ ಉಳಿದಿಲ್ಲ. ಚಂದ್ರಗಿರಿ ನದೀತೀರದಲ್ಲಿದ್ದ ಹಚ್ಚ ಹಸುರು ಗದ್ದೆಗಳು ಮಾಯವಾಗಿವೆ. ಈ ಗದ್ದೆಗಳನ್ನು ಮಣ್ಣು ತುಂಬಿಸಿ ನಿವೇಶನಗಳನ್ನಾಗಿ ಮಾಡಲಾಗಿದೆ. ನಮ್ಮ ರಾಜ್ಯದ ಇತರ ನಗರಗಳ ಪರಿಸ್ಥಿತಿಯೂ ಇದಕ್ಕೆ ಭಿನ್ನವಾಗಿಲ್ಲ. ನೆರೆಯ





ಮಂಗಳೂರು ನಗರವು ಹಿಂದೆ ಒಂದು ಚಿಕ್ಕ ಪಟ್ಟಣವಾಗಿತ್ತು. ಅದಕ್ಕೆ ತಾಗಿಕೊಂಡು ಕೊಡಿಯಾಲಬೈಲು ಎಂಬ ದೊಡ್ಡ ಬಯಲಿತ್ತು. ಈಗ ಆ ಬಯಲು ಚರಿತ್ರೆಯ ಪುಟಗಳನ್ನು ಸೇರಿದೆ. ಆ ಪ್ರದೇಶದಲ್ಲಿ ಬಹು ಅಂತಸ್ತಿನ ಕಟ್ಟಡಗಳು ತಲೆ ಎತ್ತಿವೆ. ಹೀಗೆ ಹಲವಾರು ನಗರೀಕರಣದ ನಿದರ್ಶನಗಳನ್ನು ನಾವು ಕಾಣುತ್ತೇವೆ. ನಗರೀಕರಣದಿಂದಾಗಿ ಹೊಸ ಸಮಸ್ಯೆಗಳು ತಲೆದೋರತೊಡಗಿವೆ. ಆಹಾರಕ್ಕಾಗಿ ಇತರರನ್ನು ಅವಲಂಬಿಸಬೇಕಾದ ಸ್ಥಿತಿ ಒದಗಿದೆ. ಬಯಲುಗಳ ನಾಶದಿಂದಾಗಿ ಜೀವಜಾಲ ವ್ಯವಸ್ಥೆಯಲ್ಲಿ ಅಸಮತೋಲನ ಉಂಟಾಗಿದೆ. ಸೊಳ್ಳೆಗಳ ಹಾಗೂ ಇತರ ಕ್ರಿಮಿಕೀಟಗಳ ಕಾಟ ಹೆಚ್ಚಾಗಿ ನಮ್ಮ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರಿವೆ. ಮಳೆ ಬಂದ ಕೂಡಲೇ ಕೃತಕ ನೆರೆಯುಂಟಾಗುತ್ತದೆ. ಮಳೆ ನಿಂತೊಡನೆಯೆ ನೀರಿಗಾಗಿ ಹಾಹಾಕಾರ ಉಂಟಾಗುತ್ತದೆ. ಅದೇ ರೀತಿ ಗುಡ್ಡಗಳನ್ನು ಅಗೆದು ಬಯಲುಗಳನ್ನು ತುಂಬಿಸುವುದರಿಂದಲೂ ಅಪಾಯಗಳುಂಟಾಗುತ್ತವೆ.

ನಗರೀಕರಣವು ನಮ್ಮನ್ನು ಗದ್ದಲದ ಬದುಕಿಗೆ ಕೊಂಡೊಯ್ಯುತ್ತದೆ. ಗ್ರಾಮ್ಯ ಸಂಸ್ಕೃತಿಯ ಅಂಶಗಳು ನಾಶವಾಗುತ್ತವೆ. ಜನರ ಮನಸ್ಸುಗಳನ್ನು ಬೆಸೆಯುವ ಕೊಂಡಿಗಳು ಮರೆಯಾಗುತ್ತವೆ. ಗ್ರಾಮ್ಯ ಪರಿಸರದ ಕೈತೋಟಗಳು, ತೆಂಗಿನ ತೋಟಗಳು, ಹೊಲಗದ್ದೆಗಳು ನಿರ್ನಾಮಗೊಳ್ಳುತ್ತವೆ. ಜನರ ಹಸಿವು ನೀಗುವುದು ಅನ್ನಾಹಾರಗಳಿಂದಲೇ ಹೊರತು ಕಬ್ಬಿಣ, ಮರಳು, ಸಿಮೆಂಟುಗಳಿಂದಲ್ಲ. ಹೀಗೆ ಇಂದು ಜಗತ್ತಿನಲ್ಲಿ ವಿಸ್ಮಯಕಾರಿಯೂ, ವಿನಾಶಕಾರಿಯೂ ಆದ ಕೆಲಸಗಳು ನಿರಾತಂಕವಾಗಿ ನಡೆಯುತ್ತವೆ. ಒಟ್ಟಿನಲ್ಲಿ ನಗರೀಕರಣ ಮನುಕುಲಕ್ಕೆ ಮಾರಕವಾಗಿದೆ. ಆದುದರಿಂದ ನಗರೀಕರಣದ ವೇಗಕ್ಕೆ ಕಡಿವಾಣ ಹಾಕಲೇಬೇಕು. ಪರಿಸರ ಸೌಹಾರ್ದಯುತವಾಗಿರುವ, ಕೃಷಿಭೂಮಿಯನ್ನು ನಾಶಗೊಳಿಸದ ನಗರೀಕರಣವು ಇಂದಿನ ಅಗತ್ಯವಾಗಿದೆ.

❒ 'ಬಯಲು ಚರಿತ್ರೆಯ ಪುಟಗಳನ್ನು ಸೇರಿದೆ' – ನಿಮ್ಮ ಅಭಿಪ್ರಾಯವೇನು? ಚರ್ಚಿಸಿ ಬರೆಯಿರಿ.

❒ ಬಯಲುಗಳ ನಾಶವನ್ನು ತಡೆಗಟ್ಟುವ ಹೊಣೆಗಾರಿಕೆ ನಮಗೆಲ್ಲರಿಗೂ ಇದೆಯಷ್ಟೆ? ಈ ವಿಚಾರವಾಗಿ ಜನರನ್ನು ಜಾಗೃತಗೊಳಿಸಲು ಪತ್ರಿಕೆಯೊಂದರ ಓದುಗರ ಓಲೆ ವಿಭಾಗಕ್ಕೆ ಪತ್ರವನ್ನು ಬರೆಯಿರಿ.

❒ ನಗರೀಕರಣದಿಂದುಂಟಾಗುವ ದುಷ್ಪರಿಣಾಮಗಳ ಕುರಿತು ಪತ್ರಿಕಾ ವಾರ್ತೆಗಳು, ಚಿತ್ರಗಳು ಹಾಗೂ ಲೇಖನಗಳನ್ನು ಸಂಗ್ರಹಿಸಿ ಭಿತ್ತಿಪತ್ರಿಕೆಯೊಂದನ್ನು ತಯಾರಿಸಿರಿ.

❒ ಅದೊಂದು ಸಣ್ಣ ಪೇಟೆ. ಅದರ ಸಮೀಪ ಸರಕಾರವು ಒಂದು ಕೈಗಾರಿಕಾ ಕೇಂದ್ರವನ್ನು ಸ್ಥಾಪಿಸಲು ತೀರ್ಮಾನಿಸಿತು. ಕಲ್ಲುಬಂಡೆಗಳನ್ನು ಒಡೆದು ಆ ಪ್ರದೇಶವನ್ನು ಸಮತಟ್ಟುಗೊಳಿಸಲಾಯಿತು. ಇದರಿಂದಾಗಿ ನಿಸರ್ಗದತ್ತವಾದ ಗುಹೆಯೊಂದು ನಾಮಾವಶೇಷವಾಯಿತು. ಬಳಿಕ ಅಲ್ಲಿ ಒಂದೊಂದೇ ಕಟ್ಟಡ ತಲೆಯೆತ್ತತೊಡಗಿತು. ಬ್ಯಾಂಕು, ಅಂಚೆ ಕಛೇರಿ, ಅಂಗಡಿಗಳು, ಶಾಲೆ ಕಾಲೇಜುಗಳು ... ಹೀಗೆ ಕಟ್ಟಡಗಳ ಸಂಖ್ಯೆಯೂ ಜನಸಂಖ್ಯೆಯೂ ಹೆಚ್ಚತೊಡಗಿದುವು. ಇಂತಹ ಬೆಳವಣಿಗೆಗೆ ಕಡಿವಾಣ ಹಾಕದಿದ್ದರೆ ಮುಂದಿನ ಜನಾಂಗಕ್ಕೆ ಅಪಾಯ ಕಟ್ಟಿಟ್ಟ ಬುತ್ತಿ ಎಂದು ಜನರು ಮಾತಾಡತೊಡಗಿದರು.

- ಅಡಿಗೆರೆ ಎಳೆದ ಪದಗಳನ್ನು ಬಳಸಿಕೊಂಡು ನೀವೂ ಒಂದು ಸನ್ನಿವೇಶ ಚಿತ್ರಣ ಮಾಡಿರಿ.




# ಶಾಂತಿ ನಗರ

ಎಲ್ಲ ಊರುಗಳಿಗೂ ಒಂದೊಂದು ಇತಿಹಾಸವಿರುವಂತೆ ಈ ಶಾಂತಿಗೆರೆಗೂ ಒಂದು ಇತಿಹಾಸವಿದೆ. ಬಹಳ ಹಿಂದೆ ಶಾಂತೇಶ್ವರ ನಾಯಕನೆಂಬವನು ಈ ಪ್ರದೇಶವನ್ನು ಆಳುತ್ತಿರಬೇಕಾದರೆ ಈ ಊರಿನಲ್ಲಿ ಈಗಿರುವ ಕೆರೆಯನ್ನೂ ಶ್ರೀರಾಮೇಶ್ವರ ದೇವಸ್ಥಾನವನ್ನೂ ಕಟ್ಟಿಸಿದ್ದನಂತೆ. ಕೆರೆಗ ಅವನ ಹೆಸರನ್ನೇ ಇಟ್ಟಿದ್ದರಿಂದ ಕೆರೆಯ ಆ ಬದಿಯಲ್ಲಿ ತಲೆ ಎತ್ತಿದ ಊರಿಗೂ ಅದೇ ಹೆಸರಾಯಿತು.

ಕೆರೆಯ ಕೆಳಗೆ ವಿಶಾಲವಾದ ಹೊಲಗಳಿವೆ... ಹೊಲಗಳಾಚೆಗೆ ಹಸಿರು ಹಸಿರಾಗಿ ನಿಂತ ಕಾಡಿದೆ. ಈ ಬದಿಯಲ್ಲಿ ಊರಿನ ಕಾವಲಿಗೆ ನಿಂತಂತೆ ಒಂದು ಗುಡ್ಡ. ಬಹುತೇಕ ರೈತರು ಹಿಂದೆಲ್ಲಾ ಎರಡೆರಡು ಬೆಳೆ ತೆಗೆಯುತ್ತಿದ್ದರಂತೆ. ಊರಲ್ಲಿ ಯಾವುದೇ ಗದ್ದಲವಿಲ್ಲ; ಗಲಾಟೆಯಿಲ್ಲ. ಜನ ಬೆಳೆದುದನ್ನು ಮಾರಿ, ಬೇಕಾದ್ದನ್ನು ಕೊಂಡು ತಂದು, ತಿಂದುಂಡು ಸುಖವಾಗಿ ನೆಮ್ಮದಿಯಿಂದಿದ್ದಾರೆ.

ಶಿವರಾಮಯ್ಯ, ರಾಮಕೃಷ್ಣಯ್ಯ ಊರಿನ ಈರ್ವರು ಶ್ರೀಮಂತರು. ಕೊಂಚ ಮಟ್ಟಿಗೆ ಓದು ಬರಹ ಬಲ್ಲವರು. ಹಳ್ಳಿಯಲ್ಲಿ ಮಾತ್ರವಲ್ಲ, ಹೊರಗೆ ಕೂಡಾ ಇವರಿಗೆ ಗೌರವ. ಊರಿನಲ್ಲಿ ಏನೇ ಸಮಸ್ಯೆ ಉದ್ಭವಿಸಲಿ ಅದಕ್ಕೆ ಪರಿಹಾರವನ್ನು ಇವರಿಬ್ಬರು ಸಮರ್ಥವಾಗಿ ಕಂಡುಹಿಡಿಯಬಲ್ಲವರೆಂದೇ ಜನ ಇವರನ್ನು ವಿಶ್ವಾಸದಿಂದ ಕಾಣುವುದು, ಗೌರವಿಸುವುದು.

ಒಂದು ದಿನ ಶಿವರಾಮಯ್ಯ ಹಾಗೂ ರಾಮಕೃಷ್ಣಯ್ಯನವರಿಗೆ ಕೈಗಾರಿಕಾ ಮಂತ್ರಿಗಳನ್ನು ಕಾಣಲು ಕರೆ ಬಂತು. ಬಿಳಿ ಕಚ್ಚೆ ಪಂಚೆ, ಉದ್ದ ಶರಟು, ಮೇಲೊಂದು ಶಲ್ಯ, ಕೈಯಲ್ಲಿ ಕೊಡೆ ಹಿಡಿದು ಇಬ್ಬರೂ ಮಂತ್ರಿಗಳನ್ನು ಕಾಣಲು ಪ್ರವಾಸಿ ಮಂದಿರಕ್ಕೆ ಹೋದರು. ಒಂದು ಗಂಟೆ ಕಾದು ಕುಳಿತಿರಲು ಮಂತ್ರಿಗಳು ಬಂದರು. “ಬನ್ನಿ, ಬನ್ನಿ ... ಶಾಂತಿಗೆರೆ ನಾಯಕರು” ಎಂದು ಮಂತ್ರಿಗಳು ವಿಶೇಷ ಆಹ್ವಾನ ನೀಡಿ ಒಳಹೋದರು. ಇಬ್ಬರೂ



ಅವರನ್ನು ಹಿಂಬಾಲಿಸಿದರು. ಮಂತ್ರಿಗಳಾದ ರೇವಣಪ್ಪನವರು ಒಂದೆರಡು ನಿಮಿಷ ತಡೆದು – "ಶಾಂತಿಗೆರೆಗೂ ಅಮಲೂರಿಗೂ ನಡುವೆ ... ಅಮಲೂರಿಗೆ ಹೋಗೋ ದಾರೀಲಿ ಒಂದಿಷ್ಟು ಪಾಳು ಜಮೀನು ಇದೆಯಲ್ಲ, ಅದು ವ್ಯವಸಾಯಕ್ಕೆ ಬರೋದಿಲ್ವೇ?"

"ಇಲ್ಲ ... ಬಂಜರು ಭೂಮಿಯದು ... ಕಲ್ಲು, ಬಂಡೆ, ನೊರಜುಗಲ್ಲು ರಾಶಿ ಇದೆ ಅಲ್ಲಿ ..."

"ನಿಮ್ಮ ಊರಿಗೆ, ಸುತ್ತಮುತ್ತಲಿರೋ ಹಳ್ಳಿಯೋರಿಗೆ ಅನುಕೂಲ ಆಗೋ ಹಾಗೆ ನಾನೊಂದು ಪ್ಲಾನ್ ಮಾಡ್ತಿದ್ದೀನಿ. ಗಿರಾಕಿ ಬಂದರೆ ಆ ಜಮೀನನ್ನು ಕೊಡ್ತೀರಾ ನೀವು?"

"ಯೋಚನೆ ಮಾಡೋಣ"

"ಖಾಸಗಿಯಾಗಿ ಒಂದು ಉದ್ಯಮವನ್ನು ಅಲ್ಲಿ ಶುರು ಮಾಡಿದ್ರೆ ಹೇಗೆ ಅಂತ ಯೋಚನೆ ಮಾಡ್ತಿದ್ದೀನಿ. ನಿಮಗೂ ಅನುಕೂಲ, ಊರಿಗೂ ಲಾಭ. ಊರು ಒಂದೆರಡು ವರ್ಷಗಳಲ್ಲಿ ದೊಡ್ಡ ಪಟ್ಟಣವಾಗುತ್ತೆ."

"ಏನು ಉದ್ಯಮ ಅಂತ ಕೇಳಬಹುದೇ?"

"ನಮ್ಮ ದೇಶ ವ್ಯವಸಾಯ ಪ್ರಧಾನವಾದ್ದು ... ಬೇಸಾಯಕ್ಕೆ ಮಳೆಯೂ ಬೇಕು..... ಗೊಬ್ಬರಾನೂ ಬೇಕು .... ಹೆಚ್ಚು ಇಳುವರಿ ಆಗಬೇಕು ಅನ್ನೋದಾದ್ರೆ ಸೀಮೆಗೊಬ್ಬರದ ಬಳಕೆ ಹೆಚ್ಚಬೇಕು. ಜೊತೆಗೆ ಕೈಗೆ ಬಂದ ಬೆಳೆಗಳನ್ನು ತಿಂದು ಹಾಕೋ ಕೀಟಾಣುಗಳು ಬೇರೆ. ಈ ಕೀಟಗಳನ್ನು ಕೊಂದು ಹಾಕಲಿಕ್ಕೆ ಕೀಟನಾಶಕಗಳನ್ನು ತಯಾರಿಸೋದು ಮುಖ್ಯ. ಈ ಎರಡು ಉದ್ದೇಶಗಳನ್ನಿಟ್ಟುಕೊಂಡು ಕಾರ್ಖಾನೇನ ತೆರಿಲಿಕ್ಕೆ ಹೊರದೇಶದ ಒಂದು ಕಂಪೆನಿ ಮುಂದೆ ಬಂದಿದೆ. ಉದ್ಯಮ ಆರಂಭವಾದರೆ ಏನೂ ಉಪಯೋಗಕ್ಕೆ ಬಾರದಿರುವ ಜಮೀನಿಗೆಲ್ಲಾ ಒಳ್ಳೆ ಬೆಲೆ ಬರುತ್ತೆ. ಹಳ್ಳಿ ನಗರವಾಗಿ ಬೆಳೆಯುತ್ತೆ."

ಶಿವರಾಮಯ್ಯ ರಾಮಕೃಷ್ಣಯ್ಯನ ಮುಖ ನೋಡಿದರು. ಅವರು "ಆಯಿತು. ನೀವು ಹೇಳಿದ ಮೇಲೆ ನಾವು ಇಲ್ಲ ಅನ್ನೋದಿಲ್ಲ .... " ಎಂದರು.

ಮಳೆಗಾಲ ಮುಗಿಯುತ್ತಿದೆ ಅನ್ನುವಾಗ ಶಾಂತಿಗೆರೆಗೆ ವಾಹನಗಳ ಪ್ರವಾಹ ಹರಿಯಿತು. ಅಮಲೂರು – ಶಾಂತಿಗೆರೆ ರಸ್ತೆಗೆ ಜಲ್ಲಿ ಬಂದು ಬಿದ್ದಿತು. ಕಾರ್ಖಾನೆ ನಿವೇಶನಕ್ಕೆ ಜನ ಮುತ್ತಿಗೆ ಹಾಕಿ, ಪಾಯ ತೋಡುವ ಕೆಲಸಕ್ಕೆ ತೊಡಗಿದರೆ, ಕಬ್ಬಿಣದ ಕಂಬಗಳು, ಪಕಾಶಿಗಳು, ತಗಡುಗಳು ಒಂದು ಕಡೆಯಿಂದ ಬಂದು ರಾಶಿ ಬೀಳತೊಡಗಿದವು. ಒಂದು ಕಡೆ ಕಾರ್ಖಾನೆ ಎದ್ದರೆ ಮತ್ತೊಂದು ಕಡೆ ಮನೆಗಳು, ಪೇಟೆ ಬೀದಿ, ಅಂಚೆ ಕಛೇರಿ, ಶಾಲೆ ಎಂದು ಪ್ರತ್ಯೇಕವಾಗಿ ಎಲ್ಲವೂ ತಲೆಯೆತ್ತತೊಡಗಿದವು.

ದೂರದ ಫ್ಯಾಕ್ಟರಿ ನಿವೇಶನಕ್ಕೆ ಹೋಗುವ ಅದೊಂದು ಹೊಸ ರಸ್ತೆ. ಹಿಂದೆ ಅಲ್ಲೊಂದು ಗಾಡಿ ರಸ್ತೆ ಇತ್ತು. ಅದನ್ನೇ ಈಗ ಅಭಿವೃದ್ಧಿಪಡಿಸುತ್ತಿದ್ದಾರೆ. ಈ ಗಾಡಿ ರಸ್ತೆಯ ಎರಡೂ ಕಡೆ ಸುಮಾರು ಒಂದು ಮೈಲಿ ದೂರದ ವರೆಗೂ ಹೊಲಗಳಿದ್ದವು. ಈ ಬದಿಯಲ್ಲಿ ಕೆರೆ ಇದ್ದುದರಿಂದ, ಕೆರೆಯ ಕೆಳಗಿನ ಹೊಲಗಳಲ್ಲಿ ಒಳ್ಳೆಯ ಬೆಳೆಯಾಗುತ್ತಿತ್ತು. ಈ ಮಳೆಗಾಲ ಮುಗಿದು, ಕೊಯ್ಲಾದ ಮೇಲೆ ಈ ಹೊಲಗಳ ಮಾಲಿಕರೆಲ್ಲ ಒಂದು ಅರ್ಜಿ ಬರೆದುಕೊಂಡು ಗ್ರಾಮ ಪಂಚಾಯತ್, ಎ.ಸಿ., ಡಿ.ಸಿ., ಸರಕಾರ ಎಂದೆಲ್ಲ ತಿರುಗಾಡಿದರು. ಹೊಲಗಳನ್ನು ಮನೆನಿವೇಶನಗಳನ್ನಾಗಿ ಮಾಡಲು ಒಪ್ಪಿಗೆ ಕೊಡಿ ಎಂದೇ ಈ ತಿರುಗಾಟ. ಒಪ್ಪಿಗೆಯನ್ನೂ ತಂದರು.

ಶಾಂತಿಗೆರೆಯ ರೈತ ರಾಮಚಂದ್ರಪ್ಪ ಈ ರಸ್ತೆಯಲ್ಲಿ ಅಷ್ಟು ದೂರ ಬಂದಾಗ ಹೊಲದಲ್ಲಿ ಕೊಳೆ ಎದ್ದು ನಿಂತಿದ್ದರೂ ಅಲ್ಲಲ್ಲಿ ತುಂಡು ತುಂಡಾಗಿ ಗುರುತು ಮಾಡಿದ್ದು, ಕೆಲವೆಡೆಗಳಲ್ಲಿ ಅಡಿಪಾಯ ತೆಗೆಯುತ್ತಿರುವುದು,




ಒಂದೆರಡು ಕಡೆಗಳಲ್ಲಿ ಗೋಡೆಗಳು ಎದ್ದು ನಿಂತಿರುವುದು ಕಂಡಿತು. ಕಲ್ಲು, ಮರಳು, ಮಣ್ಣು, ಮರಗಳನ್ನು ಕೆಲವರು ಲಾರಿಗಳಲ್ಲಿ ತಂದು ಅಲ್ಲಲ್ಲಿ ಹಾಕುತ್ತಿದ್ದರು.

ರಾಮಚಂದ್ರಪ್ಪ ಹೊಲಗಳ ನಡುವೆ ಆರಂಭವಾದ ಹೊಸ ಚಟುವಟಿಕೆಗಳನ್ನು ಗಮನಿಸುತ್ತ ನಡೆದ. ಇಷ್ಟೆಲ್ಲಾ ವರ್ಷ ಕೊಯ್ಲಾದ ಮೇಲೆ ಹೊಲದಲ್ಲಿ ಬಣವೆಗಳು ಎದ್ದಿರುತ್ತಿದ್ದವು, ಇಲ್ಲಿ ಜನ ಒಕ್ಕುತ್ತಿದ್ದರು. ಒಕ್ಕಿ ಮುಗಿದ ಮೇಲೆ ಭತ್ತವನ್ನು ತುಂಬಿ ಮನೆಗೆ ಸಾಗಿಸುತ್ತಿದ್ದರು. ಇದೆಲ್ಲ ನಿಧಾನವಾಗಿ ಆಗುತ್ತಿದ್ದ ಕೆಲಸ. ಯಾವ ಗಡಿಬಿಡಿಯೂ ಇರುತ್ತಿರಲಿಲ್ಲ. ಆದರೆ ಈ ಬಾರಿ ಎಲ್ಲವೂ ಅವಸರ ಅವಸರವಾಗಿ ನಡೆದು ಹೋಗಿವೆ. ಇಲ್ಲಿ ಹೊಲಗಳಲ್ಲಿ ಮನೆಗಳು ಏಳುತ್ತಿವೆ.

***

ರಾಮಕೃಷ್ಣಯ್ಯನವರು ದೂರದ ಬೆಟ್ಟವನ್ನು ನೋಡಿದರು. ಹಿಂದಿನಂತೆ ಹಸಿರಾದ ಬೆಟ್ಟ, ಅದರ ಬುಡದಲ್ಲಿರುವ ಅಡಕೆ ತೋಟ, ಹಸಿರು ಬೆಟ್ಟದ ನೆತ್ತಿಯ ಮೇಲೆ ತೇಲುತ್ತಿದ್ದ ನಿರ್ಮಲವಾದ ಬಿಳಿಮುಗಿಲು ಅವರ ಕಣ್ಣಿಗೆ ಕಾಣಲಿಲ್ಲ. ಮೊದಲು ಎಲ್ಲಾ ಹೊಲಗಳಲ್ಲೂ ಕೆಲಸ ಆರಂಭವಾಗುತ್ತಿದ್ದಂತೆಯೇ ಕಣ್ಣು ಹಾಯಿಸಿದಷ್ಟು ದೂರ ಜನರೇ ಕಾಣುತ್ತಿದ್ದರು. ಗಾಡಿಯಲ್ಲಿ ಗೊಬ್ಬರ ಹೊಡೆಯುತ್ತಿರುವವರು, ನೇಗಿಲು ಹೂಡಿ ಉಳುತ್ತಿರುವವರು, ಹೆಂಟೆ ಹೊಡೆಯುತ್ತಿರುವವರು, ನೀರು, ಅಂಬಲಿ ಒಯ್ಯುವವರು, ಕೆಲಸ ಮಾಡಿಸುವವರು. ಮೇಲೆ ಹಗುರವಾಗಿ ತೇಲುವ, ನಿಧಾನವಾಗಿ ಕಪ್ಪು ವರ್ಣಕ್ಕೆ ತಿರುಗಿ ಭಾರವಾಗುವ ಮೋಡಗಳ ಸಂತೆ, ಕೆಳಗೆ ಸಂಭ್ರಮ ಸಡಗರದಿಂದ ತಿರುಗಾಡುವ ಜನರ ಸಂತೆ. ಈಗದು ಬರೀ ಕನಸು. ರಾಮಕೃಷ್ಣಯ್ಯ ನಿಟ್ಟುಸಿರೊಂದನ್ನು ಹೊರಸೂಸಿದರು. ಈಗ ಅಲ್ಲಿ ಕಂಡದ್ದು ರಾಕ್ಷಸಾಕಾರದ ತಗಡು ಹಾಸಿದ್ದ ಕಾರ್ಖಾನೆ. ಅದರ ಹೊಟ್ಟೆ ಸೀಳಿಕೊಂಡು ಎದ್ದು ನಿಂತ ಕೊಳವೆಗಳು. ಈ ಕೊಳವೆಗಳಿಂದ ಹೊರಬಿದ್ದು, ನೀಲಿ ಆಕಾಶವನ್ನು ಆವರಿಸಿಕೊಳ್ಳುತ್ತಿದ್ದ ಕಡು ಕಪ್ಪು ಹೊಗೆ. ರಾಮಕೃಷ್ಣಯ್ಯ ಎದೆಯ ಮೇಲೆ ಕೈಯಿರಿಸಿಕೊಂಡು ನಿಂತೇ ಇದ್ದರು.




ಫ್ಯಾಕ್ಟರಿ ಪ್ರಾರಂಭವಾದ ಮೇಲೆ ಕೆಲವೇ ದಿನಗಳಲ್ಲಿ ಆದ ಬದಲಾವಣೆಯೆಂದರೆ ಶಾಂತಿಗೆರೆ ಶಾಂತಿನಗರವಾಯಿತು. ಕೆಟ್ಟ ವಾಸನೆಯೊಂದು ಮೂಗಿಗೆ ಅಡರತೊಡಗಿದ್ದು ಇನ್ನೊಂದು ವಿಷಯ.

“ಅಯ್ಯಪ್ಪ ... ಏನಿದು ವಾಸನೆ?”

ಎಂದು ಹೋಟೆಲ್ ಗೋಪಾಲಕೃಷ್ಣನನ್ನು ಹಲವರು ಬೈದರು.

"ಗೋಪಾಲಪ್ಪ ಒಲೇಲಿ ಏನು ಸುಡುಗಾಡು ಬಿದ್ದೈತೋ ನೋಡು" ಎಂದರು ಕೆಲವರು.

ಆತ ಹುಡುಕಾಡಿ –

"ಏನೂ ಇಲ್ಲಪ್ಪ"

ಎಂದಾಗ ಜನ ಮೂಗನ್ನು ಅತ್ತ ಇತ್ತ ಹಾಯಿಸಿ ಕೊನೆಗೆ

"ವಾಸನೇ ... ಕಾರ್ಖಾನೆ ಕಡೆಯಿಂದ ಬರ್ತಾ ಇದೆ ಅಲ್ವಾ?" ಎಂದು ಮಾತನಾಡಿಕೊಂಡರು.

ಹೊಟ್ಟೆ ತೊಳಸಿದಂತಾಗಿ, ಊಟ ಮಾಡಲಾಗದೆ, ಕಾಫಿ ಕುಡಿಯಲಾಗದೆ ಜನ ಪರದಾಡುವಂತಾಯಿತು. ವಾಸನೆಯ ಹಿಂದೆಯೇ ಕವಿದುಕೊಂಡಿತು ಕಪ್ಪು ಹೊಗೆ!

**– ನಾ.ಡಿ. ಸೋಜ**

(ವಿಷಾನಿಲ ಕಾದಂಬರಿಯಿಂದ)

- ❒ ಕೆಳಗಿನ ಪದಗಳನ್ನು ಅಕಾರಾದಿಯಾಗಿ ಬರೆದು, ಅವುಗಳ ಅರ್ಥಗಳನ್ನು ಶಬ್ದಕೋಶದ ಸಹಾಯದಿಂದ ಕಂಡುಕೊಳ್ಳಿರಿ.

  ಶಲ್ಯ, ನೊರಜುಗಲ್ಲು, ಆಹ್ವಾನ, ಬಣವೆ, ಒಕ್ಕು, ಹೆಂಟೆ, ನಿರ್ನಾಮ, ಅಂಬಲಿ, ಅವಲಂಬಿಸು, ನಿದರ್ಶನ, ಇಳುವರಿ.

- ❒ ಶಾಂತಿಗೆರೆಯಲ್ಲಿ ನಡೆಯುತ್ತಿದ್ದ ಹೊಸ ಚಟುವಟಿಕೆಗಳನ್ನು ಗಮನಿಸುತ್ತಾ ಸಾಗುತ್ತಿದ್ದ ರಾಮಚಂದ್ರಪ್ಪನು ತನ್ನ ಗೆಳೆಯ ಜವರಯ್ಯನನ್ನು ಭೇಟಿಯಾಗುತ್ತಾನೆ. ಅವರಿಬ್ಬರ ನಡುವೆ ನಡೆಯಬಹುದಾದ ಸಂಭಾಷಣೆಗಳನ್ನು ಊಹಿಸಿ ಬರೆಯಿರಿ.
- ❒ ಶಾಂತಿನಗರದ ಕೀಟನಾಶಕ ಕಾರ್ಖಾನೆಯಿಂದ ವಿಷಾನಿಲ ಸೋರಿಕೆಯುಂಟಾಗಿ ಹಲವರು ಪ್ರಾಣ ಕಳೆದುಕೊಂಡಿದ್ದಾರೆಂದು ಭಾವಿಸಿರಿ. ಆದುದರಿಂದ ಕಾರ್ಖಾನೆಯನ್ನು ಮುಚ್ಚುವಂತೆ ಮತ್ತು ದುರಂತದಲ್ಲಿ ಬಲಿಯಾದವರ ಕುಟುಂಬಗಳಿಗೆ ಪರಿಹಾರ ನೀಡುವಂತೆ ಮಾನ್ಯ ಕೈಗಾರಿಕಾ ಮಂತ್ರಿಗಳಿಗೆ ಒಂದು ಮನವಿ ತಯಾರಿಸಿರಿ.
- ❒ ಪತ್ರಿಕಾ ವಾರ್ತೆಯನ್ನು ಸಿದ್ಧಪಡಿಸಿರಿ.


**ಶಾಂತಿನಗರದಲ್ಲಿ ವಿಷಾನಿಲದಿಂದ ಮಾರಿಗೌತಣ**

ಶಾಂತಿನಗರ: ಜನವರಿ 10 ..................................................................................

.............................................................................................................

.............................................................................................................

.............................................................................................................



# ನಿಸರ್ಗ

ಸಹಜ ಸುಂದರ ಸೃಷ್ಟಿಮಂದಿರ
ಋತುವಿಲಾಸವೊ ಬಂಧುರ!
ಹೊಳೆಯೆ ಉಡುಗಣ, ಸೂರ್ಯ ಚಂದಿರ,
ಬಾನು ಬೆಳ್ಳಿಯ ಹಂದರ!
ಹೆಸರ ಹೇಳಲು ತೋರದಂತಿದೆ
ನೂರು ರೀತಿಯ ತರುಗಳು
ಹಣ್ಣು ಕಾಯಿಯೊ ಹೂವು ಬೆಳೆದಿದೆ
ನೋಡಿ ತಣಿಯವು ಕಂಗಳು
ಯಾವ ಗಾನದ ವಿವಿಧ ತಾನವೊ
ಹಕ್ಕಿಯಿಂಚರ ಹೊಮ್ಮಿದೆ!
ಯಾವ ಶಕ್ತಿಯ ವಿಶ್ವರೂಪವೊ
ಪ್ರಾಣಿಸಂಕುಲ ನೆರೆದಿದೆ!
ಸಲಿಲ ದರ್ಪಣ, ನದಿಯ ನರ್ತನ
ಪಂಕ್ತಿ ಪಂಕ್ತಿಯ ಪರ್ವತ!
ಮನದ ಮಲಿನವ ತೊಡೆವ ಸಾಧನ
ಬೀಸಿ ಸುಳಿಯುವ ಮಾರುತ!
ಬುದ್ಧಿ ಬಲದಲಿ ಮನುಜ ಶಕ್ತಿಯ
ಬೆಲೆಯು ಹೆಚ್ಚಿದೆ ದಿನದಿನ
ಬನ್ನಿ ಪೂಜಿಸಿ ಸೃಷ್ಟಿದೇವಿಯ
ಇಂದೆ ಅರ್ಪಿಸಿ ತನುಮನ!

**– ಜಿ. ವರದರಾಜ ರಾವ್**



❒ ಕವನವನ್ನು ರಾಗವಾಗಿ ಹಾಡಿರಿ.



- ❒ ಕೆಳಗೆ ಕೊಡಲಾದ ಆಶಯಗಳಿರುವ ಸಾಲುಗಳನ್ನು ಕವನದಿಂದ ಆಯ್ದು ಬರೆಯಿರಿ.

  1) ಪ್ರಕೃತಿಯ ಸೃಷ್ಟಿಗಳಿಗೆಲ್ಲಾ ಸ್ವಾಭಾವಿಕವಾದ ಸೌಂದರ್ಯವಿದೆ.

  2) ನರ್ತಿಸುತ್ತಾ ಹರಿಯುತ್ತಿರುವ ನದಿಯ ನೀರು ಕನ್ನಡಿಯಂತೆ ಶುಭ್ರವಾಗಿದೆ.

  3) ತನ್ನ ಬುದ್ಧಿವಂತಿಕೆಯಿಂದ ಇಂದು ಮನುಷ್ಯನು ಅಸಾಮಾನ್ಯನಾಗಿದ್ದಾನೆ.

  4) ಸುಂದರ ನಿಸರ್ಗವನ್ನು ಪೂಜ್ಯಭಾವದಿಂದ ಉಳಿಸಿ ಬೆಳೆಸಬೇಕೇ ಹೊರತು ಹಾಳುಗೆಡಹಬಾರದು.

- ❒ ನಿಮ್ಮ ಮನಸೆಳೆದ ಪ್ರಕೃತಿಯ ಸುಂದರ ದೃಶ್ಯವೊಂದರ ಕುರಿತಾದ ನಿಮ್ಮ ಭಾವನೆಗಳನ್ನು ಬರೆಯಿರಿ.

- ❒ ಈ ಕವಿತೆಯ ಸಾರಾಂಶ ಬರೆಯಿರಿ.

- ❒ ಬಯಲು, ಕೃಷಿ, ಆಹಾರ, ನೀರು, ಕಟ್ಟಡ, ನೆರೆ, ಬರಗಾಲ, ಕೊರತೆ, ನಾಶ ಇತ್ಯಾದಿ ಪದಗಳಲ್ಲಿ ಸಾಧ್ಯವಾದಷ್ಟು ಬಳಸಿಕೊಂಡು ಕೆಳಗಿನ ಕವನದ ಸಾಲುಗಳನ್ನು ಮುಂದುವರಿಸಿರಿ.

  ಎಲವೊ ಮನುಜನೆ ಶ್ರಮಿಸು ಈಗಲೆ

  ಕೃಷಿಯ ಬಯಲನು ಉಳಿಸಲು

  ಇದು ಬರಿಯ ಮಣ್ಣಲ್ಲ ತಿಳಿದುಕೊ

  ಅನ್ನ ನೀಡುವ ಬಟ್ಟಲು

  ................................................

  ................................................

  ................................................

  ................................................

- ❒ 'ಪರಿಸರಸ್ನೇಹಿ ನಗರೀಕರಣ' ಎಂಬ ವಿಷಯದ ಬಗ್ಗೆ ನಡೆಯುವ ವಿಚಾರಸಂಕಿರಣದಲ್ಲಿ ಮಂಡಿಸಲು ಒಂದು ಪ್ರಬಂಧ ತಯಾರಿಸಿರಿ.

❖❖❖

